## ಸರಳತೆ ಮತ್ತು ಸಾಧನೆಗೆ ಒಂದು ಸಲಾಮ್!

ಝೀ ಕನ್ನಡದ 'ವೀಕೆಂಡ್ ವಿತ್ ರಮೇಶ್'ದಲ್ಲಿ ಡಾ. ನಾರಾಯಣ ಮೂರ್ತಿ ಮತ್ತು ಡಾ. ಸುಧಾ ಮೂರ್ತಿಯವರ ಸಂದರ್ಶನ ನಿಜಕ್ಕೂ ಅರ್ಥಪೂರ್ಣ ಹಾಗೂ ಅತ್ಯಂತ ಪ್ರೇರಣಾದಾಯಕವಾಗಿದೆ. ಇನ್ಫೋಸಿಸ್ ನಂತಹ ಸಂಸ್ಥೆ ಕಟ್ಟಿ ಜಗತ್ತಿನ ನಕಾಶೆಯಲ್ಲಿ ಗುರುತಿಸುವಂತೆ ಮಾಡಿದ ನಮ್ಮ ಕನ್ನಡದ ಹೆಮ್ಮೆಯ ಸುಪುತ್ರ– ಸುಪುತ್ರಿಯರಿಗೆ ಬಹುಪರಾಕ್ ಎನ್ನಲೇ ಬೇಕು.

ದುಡ್ಡಿಗಾಗಿ ವೃತ್ತಿ ಧರ್ಮಕ್ಕೆ ದ್ರೋಹ ಬಗೆಯುವ ಜನರ ಅರ್ಥಹೀನ ಸಂದರ್ಶನಗಳ ಬದಲು ಸುಧಾ ಮೂರ್ತಿ– ನಾರಾಯಣ ಮೂರ್ತಿಯಂತವರ ಸಂದರ್ಶನ ಯುವಶಕ್ತಿಯ ಮೇಲೆ ಆರೋಗ್ಯಕರ ಪರಿಣಾಮ ಬೀರಿ ಅವರು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅನುವಾಗುತ್ತದೆ.

—ಬೀರಣ್ಣ ನಾಯಕ ಮೊಗಟಾ

ಬಿಗ್ ಸಲಾಂ: ಅಸಹಾಯಕ ಮಹಿಳೆಯರಿಗೆ, ನೊಂದವರಿಗೆ, ಶಿಕ್ಷಣ ವಂಚಿತರಿಗೆ ಅವರು ನೀಡಿರುವ ಸಹಾಯಹಸ್ತ ನಿಜಕ್ಕೂ ಗ್ರೇಟ್. ಸುಧಾ ಮೂರ್ತಿಯವರಿಗೆ ಉತ್ತಮ ಮಾರ್ಗದರ್ಶಕರಾಗಿ, ಬೆನ್ನೆಲುಬಾಗಿ ನಿಂತ ಅವರ ತಂದೆ ತಾಯಿಯರೂ ಅಭಿನಂದನಾರ್ಹರು.

—ತಾರಾ ಹೆಗಡೆ ಶಿರಸಿ

ಮೊಸರನ್ನದಲ್ಲಿ ಕಲ್ಲು: ಸಿನಿಮಾ ನಟರನ್ನೇ ಸಾಧಕರೆಂದು ಪರಿಚಯಿಸುತ್ತಿದ್ದ ರಮೇಶ್ ಈ ಬಾರಿ ಮೂರ್ತಿ ದಂಪತಿ ಪರಿಚಯಿಸಿದ್ದು ಮೆಚ್ಚುವಂತಹದ್ದು. ಕನ್ನಡದ ಬಗ್ಗೆ ಅಷ್ಟೊಂದು ಅಭಿಮಾನವುಳ್ಳ ಅವರ ಮಗಳು ಕನ್ನಡ ತಿಳಿಯದ ವಿದೇಶಿಯಂತೆ ಮಾತನಾಡಿದ್ದು ಮೊಸರಲ್ಲಿ ಕಲ್ಲು ಸಿಕ್ಕ ಹಾಗಾಯ್ತು.

—ವಿ. ವಿಜಯೇಂದ್ರ ರಾವ್ ಬೆಂಗಳೂರು

## ಕಾನೂನು ಸಲಹೆ

'ರಾಧಾ ರಮಣ'ದ ಚಮಕ್ ರಾಣಿ ಮತ್ತು ಆಕೆಯ ಪ್ರಿಯಕರ ಮಾದ ಪೊಲೀಸ್ ಕಸ್ಟಡಿಯಲ್ಲಿರುತ್ತಾರೆ. ಇನ್ನೇನು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆನ್ನುವಷ್ಟರಲ್ಲಿ ಜಾಮೀನು ಆದೇಶದೊಂದಿಗೆ ವಕೀಲರು ಪೊಲೀಸ್ ಠಾಣೆಯಲ್ಲಿ ಪ್ರತ್ಯಕ್ಷರಾಗುತ್ತಾರೆ. ಪೊಲೀಸರಿಗೆ ಆಶ್ಚರ್ಯವಾಗುತ್ತದೆ. ಬಹುತೇಕ ಧಾರಾವಾಹಿಗಳ ನಿರ್ದೇಶಕರಿಗೆ ಕಾನೂನು, ಕೋರ್ಟ್ ಹಾಗೂ ಪೊಲೀಸ್ ಇಲಾಖೆಯ ವಿಚಾರವಾಗಿ ಏನೊಂದೂ ಗೊತ್ತಿರುವುದಿಲ್ಲ. ಆರೋಪಿಗಳನ್ನು ಬಂಧಿಸಿದ್ದರೆ ಅಂತಹವರನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಿದ ನಂತರವಷ್ಟೇ ಜಾಮೀನು ಪಡೆಯಲು ಸಾಧ್ಯ. ನಿರ್ದೇಶಕರು ನ್ಯಾಯಾಲಯ, ಪೊಲೀಸ್ ಠಾಣೆ, ಜೈಲು ಹಾಗೂ ಕಾನೂನಿನ ವಿಚಾರವಾಗಿ ಕತೆ ಹೆಣೆಯುವ ಮುನ್ನ ಸಲಹೆ ಪಡೆಯುವುದು ಒಳ್ಳೆಯದು.

—ಪಿ.ಜೆ. ರಾಘವೇಂದ್ರ ಮೈಸೂರು

ವಾರದ ಪತ್ರ

## ಅಸಂಬದ್ಧ ವಿಕೃತ ಕೃತ್ಯಗಳು

ಟೀವಿ ಮಾಧ್ಯಮಗಳು ಕ್ರಮೇಣ ನಮ್ಮನ್ನು ಧಾರಾವಾಹಿಗಳಿಂದ ವಿಮುಖವಾಗುವಂತೆ ಮಾಡುವಲ್ಲಿ ಸಫಲವಾಗುತ್ತಿವೆ. ಪ್ರಾರಂಭದಲ್ಲಿ ಕಥಾ ಹಂದರವಿದ್ದ ಧಾರಾವಾಹಿಗಳು ದಿನ ಕಳೆಯುತ್ತಿದ್ದಂತೆ ವಿಚಿತ್ರಗತಿಯನ್ನು ಪಡೆದುಕೊಳ್ಳುತ್ತಾ ವೀಕ್ಷಕರಿಗೆ ಜಿಗುಪ್ಸೆಯುಂಟು ಮಾಡುತ್ತಿವೆ. ಪೊಲೀಸ್ ಇನ್ಸ್‌ಪೆಕ್ಟರ್ ಆಗಿಯೂ ಅಮಾಯಕನಂತೆ ವರ್ತಿಸುವ ರಾಜೀವನ ವರ್ತನೆ, ಎದುರಾಳಿಗಳನ್ನು ವಧಿಸಲು ಮಹಿಳಾ ಮಣಿಗಳು ಮಾಡುವ ಮೆಟ್ಟಿಲಿನ ಮೇಲೆ ಎಣ್ಣೆ ಸುರಿಯುವುದು, ಊಟದಲ್ಲಿ ವಿಷ ಬೆರೆಸುವ ಸಂಚುಗಳು ಧಾರಾವಾಹಿಗಳನ್ನೇ ತಿರಸ್ಕರಿಸುವಂತೆ ಮಾಡುತ್ತಿವೆ. ಇತ್ತೀಚೆಗೆ ಶುರುವಾದ 'ರಂಗನಾಯಕಿ'ಯ ಭೈರ ಪಾತ್ರಧಾರಿ ಎಷ್ಟು ದಿನ ಕಳೆದರೂ ತನ್ನ ಮದುಮಗನ ಪೇಟ ಕಳಚದೆ ಬಾಸಿಂಗ ಧರಿಸಿಯೇ ನಕ್ಷತ್ರಳನ್ನು ಹುಡುಕುತ್ತಿರುವುದು, 'ಅಗ್ನಿಸಾಕ್ಷಿ'ಯ ಸಿದ್ಧಾರ್ಥನಿಗೆ ಕಟ್ಟಿರುವ ತಲೆಯ ಪಟ್ಟಿ (ಬ್ಯಾಂಡೇಜ್) ಯನ್ನು ಇನ್ನೂ ತೆಗೆಯದೇ ಇರುವುದು, ಇವುಗಳೆಲ್ಲಾ ನಿಜವಾಗಲೂ ಅಸಬಂದ್ಧವೇ ಆಗಿದೆ. ಇನ್ನಾದರೂ ನಿರ್ದೇಶಕರು ಇವುಗಳ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಅಗ್ನಿಸಾಕ್ಷಿ, ಲಕ್ಷ್ಮೀಬಾರಮ್ಮ, ಕುಲವಧು, ಪುಟ್ಟಗೌರಿ ಇವುಗಳೆಲ್ಲಾ ಯಾವಾಗ ಮುಗಿಯುತ್ತವೆಯೋ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿರುವ ನಮ್ಮ ತಾಳ್ಮೆಯನ್ನು ಹೆಚ್ಚುದಿನ ಪರೀಕ್ಷಿಸಬೇಡಿ... ಪ್ಲೀಸ್...

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಅಗ್ನಿಸಾಕ್ಷಿಗೆ ಕೊನೆಯಿಲ್ಲವೇ?

ಕಲರ್ಸ್‌ನ 'ಅಗ್ನಿಸಾಕ್ಷಿ'ಗೆ ಮತ್ತೊಂದು ಹೊಸ ಪಾತ್ರ ಸೇರಿದೆ. ಅದು ಸದ್ಯಕ್ಕೆ ಕೊನೆಗೊಳ್ಳುವ ಲಕ್ಷಣ ಕಾಣುತ್ತಿಲ್ಲ. ನಾಯಕ ಸಿದ್ಧಾರ್ಥನನ್ನು ಅಪಹರಿಸಲಾಗಿತ್ತು. ಮರು ಪ್ರವೇಶವಾಗಿ ಸುಖಾಂತ್ಯಗೊಳ್ಳುವುದೆಂದು ನಿರೀಕ್ಷಿಸಿದ್ದವರಿಗೆ ಈಗ ಹೊಸ ಪಾತ್ರಧಾರಿ ಪ್ರವೇಶದಿಂದ ನಿರಾಶೆಯಾಗಿದೆ. ಖಳನಾಯಕಿ ಚಂದ್ರಿಕಾಳನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರೂ ಸಹ ಅವಳು ಜೈಲಿನಿಂದಲೇ ನಡೆಸುವ ಕುತಂತ್ರಗಳನ್ನು ಇನ್ನೂ ಎಷ್ಟು ಕಾಲ ಸಹಿಸಿಕೊಳ್ಳಬೇಕೋ? ಅಗ್ನಿಸಾಕ್ಷಿಯಲ್ಲದೆ 'ಕುಲವಧು', 'ಕಿನ್ನರಿ', 'ಲಕ್ಷ್ಮಿಬಾರಮ್ಮ', 'ರಾಧಾರಮಣ', 'ಪದ್ಮಾವತಿ' ಧಾರಾವಾಹಿಗಳ ಹಣೆಬರಹವು ಅಷ್ಟೇ.

— ಬಿ. ಚಾಮರಾಜ ಅರಸ್, ಮೈಸೂರು

## ಕೂಡು ಕುಟುಂಬಗಳು ಮತ್ತು ಧಾರಾವಾಹಿ

'ರಾಧಾ ರಮಣ', 'ಅಗ್ನಿಸಾಕ್ಷಿ', 'ಕಿನ್ನರಿ', 'ಕುಲವಧು', 'ಮಿಥುನರಾಶಿ', 'ರಂಗನಾಯಕಿ' ಎಲ್ಲ ಧಾರಾವಾಹಿಗಳಲ್ಲೂ ಜನರಿಂದ ಗಿಜಿ ಗಿಜಿ ಎನ್ನುತ್ತಿರುತ್ತಾರೆ. ವೀಕ್ಷಕರು ತಲೆ ಕಡೆಸಿಕೊಳ್ಳುತ್ತಿರುವುದು ಯಾರಿಗೆ ಯಾರಿಗೆ ಯಾರು ಸಂಬಂಧಿ ಇತ್ಯಾದಿ. ದೇಶದಷ್ಟೇ ವಿಶಾಲವಾದ ಮನೆ ಪ್ರತಿಯೊಬ್ಬರಿಗೂ ಅವರದೇ ಕೊಠಡಿ. ಶ್ರೀಮಂತಿಕೆ ಸಾಗುವ ಪೀಠೋಪಕರಣಗಳು ಇತ್ಯಾದಿ. ಆದರೆ ಇಷ್ಟೆಲ್ಲಾ ಸೌಲಭ್ಯವಿರುವ ಮನೆಗಳಲ್ಲಿ ಒಂದು ಸಿಸಿಟೀವಿ ಇರುವುದಿಲ್ಲ. ಜೊತೆಗೆ ಅಡಿಗೆಯವರಿಗೆ ಮತ್ತು ಕೆಲಸದವರಿಗೆ ಅಭಾವ. ಮನೆಗೆ ಬಂದ ಸೊಸೆ ಮರುದಿನವೇ ಅಡಿಗೆ ಮನೆ ಜವಾಬ್ದಾರಿ ಹೊರುತ್ತಾಳೆ. ಅಸಹಜತೆಗೂ ಒಂದು ಮಿತಿಯಿರಬೇಡವೆ.

—ಶಾಂತಾ ನಾಗರಾಜ್.ಕೆ., ಬೆಂಗಳೂರು

## ಬೇಸರ ತಂದ ಮರು ಪ್ರಸಾರ

ಒಂದೇ ಕಾರ್ಯಕ್ರಮವನ್ನು ತಕ್ಷಣವೇ ಮರುಪ್ರಸಾರ ಮಾಡಿದರೆ ಪ್ರೇಕ್ಷಕ ವೃಂದಕ್ಕೆ ಬೇಸರವೆನಿಸುವುದಿಲ್ಲವೇ? ಹೋದ ವಾರ 'ಝೀ ಕನ್ನಡ ವಾಹಿನಿಯಲ್ಲಿ 'ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಸ್ವಲ್ಪ ಹಿಂದೆ ಪ್ರಸಾರವಾದ ಕಾರ್ಯಕ್ರಮವನ್ನು ಅಂದು ಮರುಪ್ರಸಾರ ಮಾಡಿದರು. ಹೊಸ ಕಲಾವಿದರ, ಗಣ್ಯರ ಕಾರ್ಯಕ್ರಮವನ್ನು ನೋಡಲು ಇಚ್ಛಿಸುವ ವೀಕ್ಷಕರಿಗೆ ಅಂದು ನಿರಾಸೆಯಾಯಿತು ಎನ್ನುವುದು ನನ್ನ ನಂಬಿಕೆ ಪ್ರಾಯಶಃ ಹೊಸ ಕಾರ್ಯಕ್ರಮದ ಮುದ್ರಿಕೆ ಸಿದ್ಧವಾಗಿಲ್ಲವೇನೋ ಎಂಬ ಸಂಶಯ ಮೂಡುವುದು ಸಹಜ.

—ಸುಂದರ್, ಬೆಂಗಳೂರು

## ಸೋತು ಗೆದ್ದ ಸಿಎಸ್ಪಿ

ಮೆಲ್ಲಗೆ ದೂರವಾಗುತ್ತಿರುವ ಮಗ ಮಧುವಿನಿಂದ ನೋವು, ಬೇಜವಾಬ್ದಾರಿ ಭಾವ. ಪೆದ್ದು ಶ್ಯಾಮಲಳಿಂದ ಮುಜುಗರ ಮೊದ್ದು ಹರಿಕುಮಾರ್‌ನಿಂದ ಪೇಚಿಗೆ ಸಿಕ್ಕಿಕೊಳ್ಳುವ ಸಿಎಸ್ಪಿಯ ಸ್ವಾಭಿಮಾನಕ್ಕೆ ಧಕ್ಕೆ ಯಾಗುತ್ತಲೇ ಬಂದಿದೆ. ಆದರೂ ನೋವುಂಡು ವಿಷಾದದ ನಗೆ ನಕ್ಕು ಒಟ್ಟಿನಲ್ಲಿ ಎಲ್ಲವನ್ನೂ ಒಪ್ಪಿಕೊಳ್ಳುವ ಸಂದರ್ಭಗಳು ಸೃಷ್ಟಿಯಾಗುತ್ತ ಹೋಗುತ್ತದೆ. ಎಲ್ಲವನ್ನೂ ಸಹಿಸಿಗೆಲ್ಲಬೇಕು ಎಂಬ ಸಿದ್ಧಾಂತಕ್ಕೆ ಬಂದು ಸೋತು ಗೆದ್ದ ಸಿಎಸ್ಪಿ ಇಲ್ಲದಿರೆ ಸೋದರಿಯ ಅಕ್ಕರೆಯ ಆರೈಕೆಯ ಸೂರು ಎಲ್ಲಿ ಸಿಕ್ಕೀತು? ಮಾಗುತ್ತಾ ಮಾಗುತ್ತಾ ಸೋಲನ್ನು ನಗುನಗುತ್ತಾ ಒಪ್ಪಿಕೊಳ್ಳಬೇಕೆಂಬ ತತ್ವವನ್ನು ತಿಳಿಹೇಳಿದಂತಿದೆ.

—ಎಸ್. ಪ್ರಭಾವತಿ ಬೆಂಗಳೂರು